# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ - 20.01.2024

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ಮಹಮ್ಮದ್ ರಫೀಕ್ | ಫ್ರಾ.ಸಾ. | - | 17 |
| ತಂದೆಯ ಹೆಸರು | - | ಮಹಬೂಬ್ ಸಾಬ್ | ಚಾ.ಸಾ. | - | 17 |
| ವಯಸ್ಸು | - | 33 ವರ್ಷ | | | |
| ಉದ್ಯೋಗ | - | ಸಹಾಯಕ ಇಂಜಿನಿಯರ್ , ಪಿಡಬ್ಲ್ಯುಡಿ , ಹೂವಿನಹಡಗಲಿ | | | |
| ವಾಸ ಸ್ಥಳ | - | ದಾವಣಗೆರೆ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ವಿಶೇಷ ಸರ್ಕಾರಿ ಅಭಿಯೋಜಕರಿಂದ -**

1. ನಾನು 22.07.2020 ರಿಂದ 28.01.2021 ರವರೆಗೆ ಸಹಾಯಕ ಇಂಜಿನಿಯರ್ ಆಗಿ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡಿದ್ದೇನೆ .

2. ದಿಃ 04.08.2020 ರಂದು ಡಿ.ವೈ.ಎಸ್.ಪಿ. ಕಚೇರಿಯಿಂದ ನಮ್ಮ ಕಚೇರಿಗೆ ಬಂದ ಕೋರಿಗೆ ಮೇರೆಗೆ ಕಣಿವೆ ಜೋಗಿಹಳ್ಳಿಯ ಸರ್ವೇ ನಂ. 51 ರಲ್ಲಿ ಪೇದೆ ಮೋಹನ್ ಎನ್ನುವವರು ತೋರಿಸಿದಂತೆ ಘಟನಾ ಸ್ಥಳದ ನಕ್ಷೆ ತಯಾರಿಸಿಕೊಟ್ಟಿರುತ್ತೇನೆ . ಸಾಕ್ಷಿ ನಕ್ಷೆ ಮತ್ತು ಸಹಿ ಗುರುತಿಸಿದ್ದರಿಂದ ನಕ್ಷೆಯನ್ನು ನಿಪಿ -29 ಎಂದು ಸಹಿ ನಿಪಿ- 29 (ಎ) ಎಂದು ಗುರುತಿಸಲಾಗಿದೆ . ಸ್ಥಳದಲ್ಲಿ ಕಂಡು ಬಂದ ಎಲ್ಲಾ ವಿಚಾರಗಳನ್ನು ನಕ್ಷೆಯಲ್ಲಿ ನಮೂದಿಸಿದ್ದೇನೆ .

**- ಪಾಟೀ ಸವಾಲು - 1 ರಿಂದ 11 ನೇ ಆರೋಪಿಗಳ ಪರವಾಗಿ - ಶ್ರೀ ಬಿ.ಎ.ಕೆ ವಕೀಲರಿಂದ -**

2. ಘಟನಾ ಸ್ಥಳದಲ್ಲಿ ಕಚ್ಚಾನಕಾಶೆ ತಯಾರಿಸಿ ಕಚೇರಿಯಲ್ಲಿ ನಿಪಿ –29 ನ್ನು ತಯಾರಿಸಿರುತ್ತೇನೆ . ಕಚ್ಚಾನಕಾಶೆಯನ್ನು ತನಿಖಾಧಿಕಾರಿಗೆ ನೀಡಿಲ್ಲ. ನಿಪಿ –2 ರಲ್ಲಿ ನಕ್ಷೆ ತಯಾರಿಸಿದ ದಿನಾಂಕ ನಮೂದಿಸಿಲ್ಲ ಎಂದರೆ ಸರಿ . ಕಚ್ಚಾನಕಾಶೆಗೆ ನಾನು ಪೇದೆ ಮೋಹನ್ ರವರ ಸಹಿ ಪಡೆದಿಲ್ಲ . ಡಿ.ವೈ.ಎಸ್.ಪಿ. ರವರು ನಮ್ಮ ಕಚೇರಿಗೆ ಕೋರಿಕೆ ಪತ್ರ ಕಳುಹಿಸಿದ್ದರು . ಘಟನೆ ನಡೆಯಿತು ಎನ್ನಲಾದ ಸರ್ವೇ ನಂ.51 ಕ್ಕೆ ಬೇಟಿ ನೀಡಿ ನಕ್ಷೆ ತಯಾರಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಸರ್ವೇ ನಂ.51 ರ ಆರ್ ಟಿ ಸಿ ಅನು ನೋಡಿಲ್ಲ . ನಾನು ಸ್ಥಳಕ್ಕೆ ಬೇಟಿ ನೀಡಿಲ್ಲ ಮತ್ತು ನಿಪಿ –29 ನ್ನು ನಾನು ತಯಾರಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
*ಓದಿ ಹೇಳಿ ಕೇಳಿ ಸರಿ ಇದೆ.*

*ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ*
*ನ್ಯಾಯಾಧೀಶರು, ಚಿತ್ರದುರ್ಗ.*